4	ಬಿ.ಎಲ್.ಡಿ.ಇ. ವಿದ್ಯಾ ಸಂಸ್ಥೆ, ಬಿಜಾಪುರ.	ಸಂಖ್ಯಾ ಶಾಸ್ತ್ರ ದೈಹಿಕ ಶಿಕ್ಷಣ ಬೋಧಕರು	ಪ.ಜಾ–01 ಪ.ಜಾ–01	ಕಾಶಿಆ–90– ಖಾಕಾವಿ–3/2002–03, ಬೆಂಗಳೂರು ದಿನಾಂಕ: 01.10.2009
		ಅರ್ಥಶಾಸ್ತ್ರ	ಪ.ಜಾ–01	ಕಾಶಿಆ–90– ಖಾಕಾವಿ–2/ 2002–03, ಬೆಂಗಳೂರು ದಿನಾಂಕ: 07.07.2009
ಬೆಂಗಳೂರು/ಮೈಸೂರು/ಶಿವಮೊಗ್ಗ/ಮಂಗಳೂರು/ಗುಲ್ಬರ್ಗಾ ವಿಭಾಗ				
ಅಗತ್ಯ ಆರ್ಯಭಾರ ಇಲ್ಲದೆ ಇರುವುದರಿಂದ ಈವರೆವಿಗೂ ಗುರ್ತಿಸಲಾಗಿರುವ ಭವಿಷ್ಯದಲ್ಲಿ ತುಂಬಬೇಕಾದ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿರುವುದಿಲ್ಲ ಹಾಗೂ ಧಾರವಾಡ ವಿಭಾಗದಲ್ಲಿ ಇನ್ನೂ ಕೆಲವು ಹುದ್ದೆಗಳಿಗೆ ಅಗತ್ಯ ಕಾರ್ಯಭಾರ ಇಲ್ಲದಿರುವುದರಿಂದ ಹುದ್ದೆಗಳನ್ನು ತುಂಬಿರುವುದಿಲ್ಲ.				

ಮೀಸಲಿದ್ದ ಉಪನ್ಯಾಸಕರ ನೇಮಕಾತಿ

769 (1100) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಅನುದಾನಿತ ಬಿ.ಎಂ.ಎಸ್. ಮಹಿಳಾ ಪದವಿ ಕಾಲೇಜು, ಬೆಂಗಳೂರು, ಇಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿದ್ದ ಉಪನ್ಯಾಸಕರ ಹುದ್ದೆ ಖಾಲಿ ಇದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆದ, ಆಯ್ಕೆ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಗೆ 08 ತಿಂಗಳಾದರೂ ಅನುಮೋದನೆ ನೀಡದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೇಮಕಾತಿ ಹಂತದಲ್ಲಿ ಸದರಿ ಹುದ್ದೆಗೆ ಲಭ್ಯವಿದ್ದ ಕಾರ್ಯಭಾರವನ್ನು ಬೇರೆ ಮಾರ್ಗದಲ್ಲಿ ನೇಮಕ ಮಾಡಲಾಗಿರುವ ಉಪನ್ಯಾಸಕರಿಗೆ ವರ್ಗ ಮಾಡಿ ಪರಿಶಿಷ್ಟ ಜಾತಿಯ ಅಭ್ಯರ್ಥಿಯ ನೇಮಕಾತಿಯನ್ನು ತಿರಸ್ಕರಿಸುವುದು ಸರಿಯಾದ ಕ್ರಮವೆ, ಇದು ಮೀಸಲಾತಿಯ ನಿಯಮ ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ;

ಇ) ಈ ರೀತಿ ಬೇರೆ ಮಾರ್ಗದಿಂದ ನೇಮಕವಾದ ಸಾಮಾನ್ಯ ಅಭ್ಯರ್ಥಿಗಳಿಗೆ ಕಾರ್ಯಭಾರವನ್ನು ವರ್ಗಾಯಿಸುವುದರಿಂದ ಮೀಸಲಾತಿ ನಿಯಮದಡಿ ಭರ್ತಿ ಮಾಡಬೇಕಾದ ಹುದ್ದೆಗಳನ್ನು ಕಾರ್ಯಭಾರವಿಲ್ಲವೆಂದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರಿಗೆ ವಂಚಿಸಿ ವ್ಯವಸ್ಥಿತವಾಗಿ ಖಾಲಿ ಇರಿಸುವಂತೆ ಷಡ್ಯಂತ್ರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇಂತಹ ಅಧಿಕಾರಿಗಳ ಮೇಲೆ ಯಾವ ರೀತಿಯ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಖಾಸಗಿ ಅನುದಾನಿತ ಬಿ.ಎಂ.ಎಸ್. ಮಹಿಳಾ ಪದವಿ ಕಾಲೇಜು, ಬೆಂಗಳೂರು, ಇಲ್ಲಿ ಖಾಲಿ ಇದ್ದ ಸಮಾಜಶಾಸ್ತ್ರ ಉಪನ್ಯಾಸಕರ ಹುದ್ದೆ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆದು ಆಯ್ಕೆ ಸಮಿತಿಯಿಂದ ಅಭ್ಯರ್ಥಿಯನ್ನು ಆಯ್ಕೆಗೊಳಿಸಲಾಯಿತು. ಆಯ್ಕೆಯಾದ ಅಭ್ಯರ್ಥಿಯ ನೇಮಕಾತಿ ಅನುಮೋದಿಸುವ ಹಂತದಲ್ಲಿ ಮೇಲ್ಕಂಡ ಕಾಲೇಜಿನ ಪ್ರಾಂಶುಪಾಲರು ಪತ್ರ ಬರೆದು ಸದರಿ ಕಾಲೇಜಿನ ಪದವಿ ಪೂರ್ವ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸೇವಾ ಸಕ್ರಮಾತಿಗೊಂಡ ಸ್ಟಾಪ್‌ಗ್ಯಾಪ್ ಉಪನ್ಯಾಸಕರಾದ ಶ್ರೀಮತಿ ಕೆ.ಅನಿತ ಇವರಿಗೆ ಯುಜಿಸಿ ವೇತನ ಶ್ರೇಣಿ ನೀಡಿದ ಪ್ರಯುಕ್ತ ಸರ್ಕಾರದ ನಿಯಮಗಳ ಪ್ರಕಾರ ಪದವಿ ಕಾಲೇಜಿಗೆ ಮರು ಹಂಚಿಕೆ ಮಾಡಬೇಕಾಗಿದ್ದರಿಂದ ಆಯ್ಕೆ ಸಮಿತಿ ಮೂಲಕ ಪದವಿಯಲ್ಲಿ ಕಾರ್ಯಭಾರವಿರುವುದಿಲ್ಲ. ಆದ್ದರಿಂದ ಸದರಿ ಅಭ್ಯರ್ಥಿಯ ನೇಮಕಾತಿಯನ್ನು ಕಾರ್ಯಭಾರ ಇರುವುದರಿಲ್ಲವಾದ್ದರಿಂದ ಅನುಮೋದಿಸಿರುವುದಿಲ್ಲ.

ಆ) ಶ್ರೀಮತಿ ಕೆ.ಅನಿತ, ಇವರು ಸ್ಟಾಪ್‌ಗ್ಯಾಪ್ ಉಪನ್ಯಾಸಕರಾಗಿ ಬಿ.ಎಂ.ಎಸ್. ಸಂಯುಕ್ತ ಪದವಿ ಕಾಲೇಜಿನಲ್ಲಿ ನೇಮಕಾತಿ ಹೊಂದಿದ್ದು ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಖಾಯಂಗೊಳಿಸಲಾಗಿದ್ದು ಪದವಿ ಪೂರ್ವ ವಿಭಾಗದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಸದರಿಯವರಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ/160/ಯುಪಿಸಿ/2008, ದಿನಾಂಕ: 06–06–2009ರಲ್ಲಿ ಯುಜಿಸಿ ವೇತನ

ಶ್ರೇಣಿಯನ್ನು ಮಂಜೂರು ಮಾಡಿರುವುದರಿಂದ ನಿಯಮಾನುಸಾರ ಸದರಿ ಯವರನ್ನು ಪದವಿ ವಿಭಾಗದಲ್ಲಿ ಲಭ್ಯವಿದ್ದ ಕಾರ್ಯಭಾರಕ್ಕೆ ಮರು ಹಂಚಿಕೆ ಗೊಳಿಸಲಾಗಿದೆ. ಆದ್ದರಿಂದ ಪದವಿ ವಿಭಾಗದಲ್ಲಿ ಉಳಿಕೆ ಕಾರ್ಯಭಾರ ಇರುವುದಿಲ್ಲ. ಸದರಿ ವಿಷಯದಲ್ಲಿ ಮುಂದೆ ಕಾರ್ಯಭಾರ ಉಂಟಾದಾಗ ಆಯ್ಕೆಯಾದ ಅಭ್ಯರ್ಥಿಯ ನೇಮಕಾತಿಯನ್ನು ಅನುಮೋದಿಸಲಾಗುವುದು. ಸರ್ಕಾರದ ಪಾಲಿಸಿ ನಿಯಮಗಳ ಪ್ರಕಾರ ಮರು ಹಂಚಿಕೆ ಮಾಡಿರುವು ದರಿಂದ ಮತ್ತು ಪ.ಜಾ ಮೀಸಲಾತಿ ಹುದ್ದೆಗೆ ಎದುರಾಗಿ ಮರು ಹಂಚಿಕೆ ಮಾಡಿರುವುದಿಲ್ಲವಾದ್ದರಿಂದ ಮೀಸಲಾತಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದಿಲ್ಲ.

ಇ) ಶ್ರೀಮತಿ ಕೆ.ಅನಿತ ಇವರು ಸಂಯುಕ್ತ ಪದವಿ ಕಾಲೇಜಿನಲ್ಲಿ ಸ್ಟಾಪ್‌ಗ್ಯಾಪ್ ಉಪನ್ಯಾಸಕರಾಗಿ ನೇಮಕ ಹೊಂದಿದ್ದು ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಖಾಯಂಗೊಳಿಸಲಾಗಿತ್ತು. ಪದವಿ ಊರ್ವ ವಿಭಾಗದಲ್ಲಿ ಬೋಧಿಸುತ್ತಿದ್ದ ಇವರಿಗೆ ಸರ್ಕಾರವು ಯುಜಿಸಿ ವೇತನ ಶ್ರೇಣಿ ಮಂಜೂರು ಮಾಡಿರುವುದರಿಂದ ಸದರಿಯವರನ್ನು ಸರ್ಕಾರದ ನಿಯಮಗಳ ಪ್ರಕಾರ ಪದವಿಗೆ ಮರು ಹಂಚಿಕೆಗೊಳಿಸಲಾಗಿದೆಯೇ ಹೊರತು ಯಾವುದೇ ಷಡ್ಯಂತ್ರ ನಡೆಸಿರುವುದಿಲ್ಲ.

ಮೇಲ್ಕಂಡ ಕಾಲೇಜಿನಲ್ಲಿ ಸಮಾಜಶಾಸ್ತ್ರದ 03 ಮಂಜೂರಾದ ಉಪನ್ಯಾಸಕರ ಹುದ್ದೆಗಳಿದ್ದು 01 ಸಾಮಾನ್ಯ ವರ್ಗದ ಮೀಸಲಾತಿ ಹುದ್ದೆಗೆ ಎದುರಾಗಿ ಶ್ರೀಮತಿ ಕೆ. ಅನಿತ ಅವರನ್ನು ಮರು ಹಂಚಿಕೆಗೊಳಿಸಲಾಗಿದ್ದು. ಪ.ಜಾ. ಮೀಸಲಾತಿ ಹುದ್ದೆಗೆ ಎದುರಾಗಿ ಮರು ಹಂಚಿಕೆ ಮಾಡಿರುವುದಿಲ್ಲ. ಆದ್ದರಿಂದ ಪ.ಜಾ ಅಭ್ಯರ್ಥಿಗೆ ಮೀಸಲಾಗಿರುವ 01 ಹುದ್ದೆಗೆ ಖಾಲಿ ಇರುತ್ತದೆ. ಆದ್ದರಿಂದ ಪ.ಜಾ ಅಭ್ಯರ್ಥಿಗೆ ಅನ್ಯಾಯ ಮಾಡುವ ಉದ್ದೇಶ ಇರುವುದಿಲ್ಲ.

ಈ) ನಿಯಮಗಳ ಉಲ್ಲಂಘನೆ ಆಗಿಲ್ಲದೆ ಇರುವುದರಿಂದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಿಕ್ಷಕರನ್ನು ಸಿ.ಇ.ಟಿ. ಮೂಲಕ ನೇಮಕಾತಿ

770 (1322) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?